

# ಎಂದೆಂದೂ ಮುಗಿಯದ ಲಾಕ್‌ಡೌನ್!

**ಲಾಕ್‌ಡೌನ್ ಅವಧಿಯಲ್ಲಿ ಮಹಿಳೆಯರ ಮೇಲಿನ ಶೋಷಣೆ ಹೆಚ್ಚಾದ ವರದಿಗಳು ಬರುತ್ತಿವೆ. ಸದಾ ಆಳುವ ಅಧಿಕಾರದ ಪುರುಷನಿಗೆ ಈ ಲಾಕ್‌ಡೌನ್ ಬಂಧನವಾಗಿ ಕಂಡಿರಬಹುದು. ಆದರೆ ಮಹಿಳೆಗೆ? ನೂರಾರು ವರ್ಷಗಳಿಂದ ಅವಳು ಅನುಭವಿಸುತ್ತಿರುವ ಲಾಕ್‌ಡೌನ್‌ನ ಅಗೋಚರ ಕಂಬಿಗಳನ್ನು ಪರಿಚಯಿಸುವ ಕಿರುಚಿತ್ರವಿದು.**

**■ ಗೌರಿ**

‘ಮೊದಲ ಬಾರಿ ಆದಾಗ ಇದು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ; ಆಕಸ್ಮಿಕವಾಗಿ ಆಯ್ತು ಅನಿಸುತ್ತದೆ. ಅದೇ ನಿಜ ಅನ್ನುವ ಹಾಗೆ ಒಂದು ಸಾರಿ ಕೂಡ ತೂರಿ ಬರುತ್ತದೆ. ಬಹುಶಃ ಇನ್ನಿದು ಪುನರಾವರ್ತನೆ ಆಗುವುದಿಲ್ಲ ಎಂದುಕೊಳ್ಳುತ್ತೇವೆ. ಆದರೆ ಮತ್ತೆ...’

ಕವಿತಾ ಅರೋರಾ ಎಂಬ ಮೇಲ್ವರ್ಗದ, ಮಧ್ಯಮ ವಯಸ್ಸಿನ ಹೆಣ್ಣುಮಗಳು ಗಂಡ ಹೊಡೆದು ಒಡೆದುಹೋದ ಹಣೆಯನ್ನು ಸವರಿಕೊಳ್ಳುತ್ತ ಆಡುವ ಈ ಮಾತುಗಳು, ನಮ್ಮ ಸಮಾಜದಲ್ಲಿ ಸಹಸ್ರ ವರ್ಷಗಳಿಂದ ‘ಲಾಕ್‌ಡೌನ್’ ಆಗಿ ನರಳುತ್ತಿರುವ ಮಹಿಳಾಸಮೂಹದ ಸಮೂಹಚೀತ್ಕಾರದಂತೆಯೂ ಕೇಳುತ್ತದೆ. ಶ್ರೀಮಂತಿಕೆ, ಆಧುನಿಕತೆ, ಶಿಕ್ಷಣ ಯಾವುದೂ ಅವಳನ್ನು ಈ ನರಕದಿಂದ ದಾಟಿಸಲು ವಿಫಲಾಗದ ವಿಪರ್ಯಾಸವನ್ನೂ ಧ್ವನಿಸುತ್ತದೆ.

ಅಂದಹಾಗೆ, ಇದು ಫಲ್ಗುಣಿ ಠಾಕೂರ್ ನಿರ್ದೇಶನದ ‘ದ ರಿಲೇಷನ್‌ಷಿಪ್ ಮ್ಯಾನೇಜರ್’ ಕಿರುಚಿತ್ರದ ದೃಶ್ಯ.

ಇದು ಲಾಕ್‌ಡೌನ್ ಅವಧಿಯಲ್ಲಿ ಮಾಡಿದ ಕಿರುಚಿತ್ರ. ಅಷ್ಟೇ ಅಲ್ಲ, ಲಾಕ್‌ಡೌನ್ ಕುರಿತಾಗಿಯೇ ಮಾಡಿದ ಕಿರುಚಿತ್ರ. ಲಾಕ್‌ಡೌನ್ ಅನ್ನುವುದನ್ನು ಮಹಿಳೆಯ ಪಾಲಿಗೆ ನೂರಾರು ವರ್ಷಗಳಿಂದ ಜಾರಿಯಲ್ಲಿರುವ ವ್ಯವಸ್ಥೆ ಎಂಬ ಸಂಗತಿಯನ್ನು ನಮ್ಮೆದುರಿಗೆ ರಾಚುವಂತೆ ತೆರೆದಿಡುವ ಕಿರುಚಿತ್ರ.

ವಿನಯ್ ದುಬೆ ಬ್ಯಾಂಕೊಂದರ ಉದ್ಯೋಗಿ. ಅವನ ಹುದ್ದೆಯ ಹೆಸರು ಆರ್.ಎಂ. ಅಂದರೆ ರಿಲೇಷನ್‌ಷಿಪ್ ಮ್ಯಾನೇಜರ್. ಪ್ರತಿದಿನ ಹಲವು ಶ್ರೀಮಂತರಿಗೆ ಕರೆ ಮಾಡಿ, ಅವರ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಲಹೆ ನೀಡುವುದು ಅವನ ಕೆಲಸ.

ಒಂದು ದಿನ ರವಿ ಅರೋರಾ ಎಂಬ ವ್ಯಕ್ತಿಗೆ ಕರೆ ಮಾಡುತ್ತಾನೆ. ಆಗ ಅವನ ಮನೆಯಲ್ಲಿ ಹೆಣ್ಣೊಬ್ಬಳ ಚೀತ್ಕಾರದ ಧ್ವನಿ ಕೇಳಿಸುತ್ತದೆ. ಅವನಿಗೆ ಕಳವಳವಾಗುತ್ತದೆ. ಅವರ ವೈಯಕ್ತಿಕ ಬದುಕಿನಲ್ಲಿ ಹಸ್ತಕ್ಷೇಪ ಮಾಡಲು ಅವನಿಗೆ ಯಾವುದೇ ಅಧಿಕಾರವಿಲ್ಲ. ಆದರೆ ಅಲ್ಲಿ ಚೀತ್ಕಾರ ಕೇಳಿದ ಮೇಲೂ ಸುಮ್ಮನಿರಲು ಇವನಿಗೆ ಸಾಧ್ಯವಾಗುವುದಿಲ್ಲ. ಆ ವ್ಯಕ್ತಿಯ ಹೆಂಡತಿ ಕವಿತಾ ಅರೋರಾಗೆ ಕರೆ ಮಾಡುತ್ತಾನೆ. ಕರೆ ಮಾಡಿ ಗೃಹಿಣಿಯರಿಗೆ ಸಂಬಂಧಿಸಿದಂತೆ ಒಂದಿಷ್ಟು ಹೊಸ ಯೋಜನೆಗಳನ್ನು ಪರಿಚಯಿಸುತ್ತಿರುವುದಾಗಿ ಮಾತಾಡಲು ತೊಡಗುತ್ತಾನೆ. ಮಾತಾಡುತ್ತ ಮಾತಾಡುತ್ತ ತನ್ನ ಅಕ್ಕನ ಕಥೆಯೊಂದನ್ನು ಹಂಚಿಕೊಳ್ಳುತ್ತಾನೆ. ತುಂಬ ಲವಲವಿಕೆಯಿಂದಿದ್ದ ಅಕ್ಕ ಮದುವೆಯಾದ ಮೇಲೆ ಗಂಡನಿಂದ ಶೋಷಣೆಗೆ ಒಳಗಾಗಿ ಕೊನೆಗೆ ಆತ್ಮಹತ್ಯೆ ಮಾಡಿಕೊಂಡ ದುರಂತ ಕಥೆಯದು. ಅತ್ತ ಕವಿತಾ ಅರೋರ ಮತ್ತೆ ವಿನಯ್ ದುಬೆ ಮಧ್ಯ ಮಹಿಳೆ ಇಂಥ ಶೋಷಣೆಯನ್ನು ಸಹಿಸಿಕೊಳ್ಳಬಹುದೇ ಎಂಬ ಬಗ್ಗೆ ಚರ್ಚೆ ನಡೆಯುತ್ತದೆ.



**ಹೆಸರು:** ದ ರಿಲೇಷನ್‌ಷಿಪ್ ಮ್ಯಾನೇಜರ್
**ನಿರ್ಮಾಣ:** ಶೀತಲ್ ಭಟಿಯಾ
**ನಿರ್ದೇಶನ:** ಫಲ್ಗುಣಿ ಠಾಕೂರ್
**ಛಾಯಾಗ್ರಹಣ:** ಅರವಿಂದ ಸಿಂಗ್
**ಸಂಕಲನ:** ಪ್ರವೀಣ್ ಕೆ.
**ಧ್ವನಿ ವಿನ್ಯಾಸ:** ಸಂಜಯ್ ಚೌಧರಿ, ದೇವಶಿಶ್ ಮಿಶ್ರಾ
**ತಾರಾಗಣ:** ದಿವ್ಯಾ ದತ್ತ, ಅನೂಪ್ ಸುನೀಲ್, ಸನಾ ಖಾನ್

‘ಮಹಿಳೆ ತನ್ನ ಮೇಲೆ ಷೋಷಣೆ ನಡೆಸುವ ಪುರುಷನ ವಿರುದ್ಧ ಸಿಡಿದು ನಿಲ್ಲಬೇಕು‘ ಎಂಬುದು ಈ ಕಿರುಚಿತ್ರದ ಒಟ್ಟಾರೆ ಸಂದೇಶ. ಆದರೆ ಇದನ್ನು ಎಲ್ಲಿಯೂ ಅತಿವಾಚ್ಯವೆನಿಸದ ಹಾಗೆ, ಕಥನದ ಚೌಕಟ್ಟಿನೊಳಗೇ ತಂದು ಕೂಡಿಸಿದ ನಿರ್ದೇಶಕರ ಕೌಶಲ ಮೆಚ್ಚಬೇಕಾದದ್ದು. ‘ಇದು ಬಿಟ್ಟರೆ ತನಗೆ ಬದುಕಲು ಬೇರೆ ದಾರಿಯೇ ಇಲ್ಲ’ ಎಂಬ ಹೆಣ್ಣಿನ ಯೋಚನೆಯಲ್ಲಿಯೇ ಅವಳ ಬಂಧನದ ಕೀಲಿಕೈ ಇರುವುದು ಎಂಬುದನ್ನು ಈ ಕಥನ ಧ್ವನಿಸುತ್ತದೆ. ದಿವ್ಯಾ ದತ್ತ ಮತ್ತು ಅನೂಪ್ ಸುನೀಲ್ ಅವರ ಪ್ರೌಢ ಅಭಿನಯವೂ ಈ ಚಿತ್ರದ ಪರಿಣಾಮವನ್ನು ಗಮನಾರ್ಹವಾಗಿ ಹೆಚ್ಚಿಸಿದೆ.

ಇತ್ತೀಚೆಗೆ ತಾಪ್ಸಿ ಪನ್ನು ಅವರು ನಟಿಸಿದ ‘ಥಪ್ಪಡ್’ ಸಿನಿಮಾ ತೆರೆಕಂಡಿತ್ತು. ಆ ಚಿತ್ರದ ನಾಯಕಿಯ ಪಾತ್ರದ ಮನಸ್ಸಿನ ಇನ್ನೊಂದು ಹೊರಳಾಗಿ ಈ ಕಿರುಚಿತ್ರವನ್ನು ನೋಡಬಹುದು.

ಈ ಕಿರುಚಿತ್ರ ವೀಕ್ಷಣೆಗೆ **bit.ly/3iNX6eK** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.